

ನವರಾತ್ರಿ ಆರಾಧನೆ ಅಂದರೆ ಮಾತೃಪ್ರಕೃತಿಯ ಆರಾಧನೆ. ಕಣ್ಣಿಗೆ ಕಾಣದ ದೇವರನ್ನು ದುರ್ಗೆಯ ರೂಪದಲ್ಲಿ, ಹಾಗೂ ಹಲವು ಹೆಸರುಗಳಿಂದ, ಭಕ್ತಿಯಿಂದ ಪೂಜಿಸುವ ಹಬ್ಬ. ಮಹಾನವಮಿಯನ್ನು ದಾಟಿ ವಿಜಯ ದಶಮಿಯ ವಿಜಯೋತ್ಸವದವರೆಗೆ ಸಾಗುತ್ತದೆ ಈ ಮಹಾಪರ್ವ.

ಶರದೃತುವಿನ ಆರಂಭ ಎಂದರೆ ಮಳೆಗಾಲದ ಅಂತ್ಯ. ಪೈರುಗಳೆಲ್ಲ ಬೆಳೆದು ಜೀವನಾಧಾರವಾದ ಅನ್ನ ಅಥವಾ ಅಕ್ಕಿ ಮನೆಯಂಗಳಕ್ಕೆ ಬರುವ ಶುಭಕ್ಷಣ. ನವರಾತ್ರಿ ಒಂಬತ್ತು ದಿನಗಳ ಉತ್ಸವ. ಈ ದಿನಗಳಲ್ಲಿ ಮಹಾಮಾತೆಯ ಒಂಬತ್ತು ಸ್ವರೂಪಗಳ ಉಪಾಸನೆ ಜನಜನಿತವಾಗಿದೆ. ಒಂಬತ್ತು ಸ್ವರೂಪಗಳಲ್ಲಿ ಮೊದಲಿನದು ಶೈಲಪುತ್ರಿ, ಎರಡನೆಯದು ಬ್ರಹ್ಮಚಾರಿಣಿ, ಮೂರನೆಯದು ಚಂದ್ರಘಂಟಾ, ನಾಲ್ಕನೆಯದು ಕುಷ್ಮಾಂಡಿನಿ, ಐದನೆಯದು ಸ್ಕಂದಮಾತಾ, ಆರನೆಯದು ಕಾತ್ಯಾಯಿನಿ, ಏಳನೆಯದು ಕಾಳರಾತ್ರಿ, ಎಂಟನೆಯದು ಮಹಾಗೌರಿ ಹಾಗೂ ಕೊನೆಯದು ಸಿದ್ಧಿಧಾತ್ರಿ.

ಇನ್ನೊಂದು ಆಧಾರದ ಪ್ರಕಾರ, ದುರ್ಗಾ, ಆರ್ಯಾ, ಭಗವತೀ, ಕುಮಾರಿ, ಅಂಬಿಕಾ, ಮಹಿಷಮರ್ಧಿನಿ, ಚಂಡಿಕಾ, ಸರಸ್ವತಿ, ವಾಗೀಶ್ವರಿ ಎಂಬುದಾಗಿ ಒಂಬತ್ತು ಬಗೆಯ ಹೆಸರಿಂದ ಪೂಜಿಸಬೇಕು. ಮತ್ತೊಂದು ಆಧಾರದ ಪ್ರಕಾರ, ಮೊದಲ ಮೂರು ದಿನಗಳಲ್ಲಿ ದುರ್ಗೆಯಾಗಿ ನಂತರದ ಮೂರು ದಿನ ಲಕ್ಷ್ಮಿಯಾಗಿ ಕೊನೆಯ ಮೂರು ದಿನಗಳಲ್ಲಿ ಸರಸ್ವತಿಯಾಗಿ ದೇವಿಯನ್ನು ಪೂಜಿಸಲಾಗುತ್ತದೆ.

ಮಧು– ಕೈಟಭ– ಮಹಿಷ– ಚಂಡ– ಮುಂಡ– ರಕ್ತಬೀಜ– ಶುಂಭ– ನಿಶುಂಭ ಮುಂತಾದ ರಾಕ್ಷಸರ ವಧೆ ಮಾಡಿ ಯುದ್ಧ ದೇವತೆಯಾಗಿ ಕಾಣುವ ದುರ್ಗೆ ಜನನಿಯಾಗಿ, ಶಿಕ್ಷಣ–ರಕ್ಷಣಗಳ ಭಾರ ಹೊತ್ತವಳಾಗಿ, ವಿದ್ಯಾಬುದ್ಧಿ ಸಂಪತ್ತುಗಳನ್ನು ಕರುಣಿಸುವವಳಾಗಿ, ಆಪತ್ತುಗಳಿಂದ ಕಾಪಾಡುವವಳೂ ಆಗಿದ್ದಾಳೆ.

**ನವರಾತ್ರಿಯಲ್ಲಿ ಆರಾಧಿಸುವ ನವಶಕ್ತಿಗಳು**

ಶೈಲಪುತ್ರಿ: ನವದುರ್ಗೆಯರಲ್ಲಿ ಮೊದಲನೆಯ ಸ್ವರೂಪ ಶೈಲಪುತ್ರಿ. ದುರ್ಗೆಯ ಮಹತ್ವ ಹಾಗೂ ಶಕ್ತಿಗಳು ಅನಂತ. ನವರಾತ್ರಿ ಪೂಜಾ ವಿಧಿಯಲ್ಲಿ ಶೈಲಪುತ್ರಿಯ ಪೂಜನ ಮತ್ತು ಉಪಾಸನೆ ಮಾಡಲಾಗುತ್ತದೆ.

ಬ್ರಹ್ಮಚಾರಿಣಿ: ದೇವಿಯ ಸ್ವರೂಪವು ಪೂರ್ಣ ಜ್ಯೋತಿರ್ಮಯ, ಅತ್ಯಂತ ಭವ್ಯವಾಗಿದೆ. ಇವಳ ಬಲಹಸ್ತದಲ್ಲಿ ಜಪಮಾಲೆ ಮತ್ತು ಎಡಹಸ್ತದಲ್ಲಿ ಕಮಂಡಲವಿದೆ.

ಚಂದ್ರಘಂಟಾ: ದುರ್ಗಾಂಬೆಯ ತಲೆಯಲ್ಲಿ ಘಂಟೆಯಾಕಾರದ ಅರ್ಧಚಂದ್ರ ಇರುವುದರಿಂದ ಇವಳನ್ನು ಚಂದ್ರಘಂಟಾ ಎಂದು ಕರೆಯುವರು. ಇವಳ ದೇಹ ಬಣ್ಣವು ಬಂಗಾರದಂತೆ ಪ್ರಕಾಶಮಾನವಾಗಿದೆ. ದಶಭುಜಾ ದೇವಿಯಾಗಿರುವ ಇವಳ ಹತ್ತು ಕೈಗಳಲ್ಲಿ ಖಡ್ಗ, ಬಾಣ ಇತ್ಯಾದಿ ಅಸ್ತ್ರಗಳಿವೆ. ಸಿಂಹ ಇವಳ ವಾಹನ.

ಕುಷ್ಮಾಂಡಿನಿ: ಚತುರ್ಥ ಸ್ವರೂಪದ ಹೆಸರು ಕೂಷಾಂಡಿನಿ. ಬ್ರಹ್ಮಾಂಡದಲ್ಲಿರುವ ಎಲ್ಲಾ ವಸ್ತುಗಳಲ್ಲಿ ಹಾಗೂ ಪ್ರಾಣಿ ಪಕ್ಷಿಗಳಲ್ಲಿರುವ ತೇಜಸ್ಸುಗಳಲ್ಲಿ ಇವಳ ನೆರಳು ಇರುತ್ತದೆ. ಇವಳಿಗೆ ಎಂಟು ಭುಜಗಳು ಇರುವುದರಿಂದ ಅಷ್ಟಭುಜಾದೇವಿ ಎಂದೂ ಕರೆಯುವರು. ಇವಳ ಎಂಟು ಕೈಗಳಲ್ಲಿ ಕಮಂಡಲ, ಧನಸ್ಸು, ಬಾಣ, ತಾವರೆ ಹೂ, ಅಮೃತಕಲಶ, ಚಕ್ರ, ಗಧೆ, ಜಪಮಾಲೆ ಇರುತ್ತದೆ. ಇವಳು ಸಿಂಹವಾಹಿನಿ.

ಸ್ಕಂದಮಾತಾ: ಸ್ಕಂದ ಭಗವಂತನ ಜನನಿಯಾದ ನವದುರ್ಗೆಯ ಈ ಪಂಚಮ ರೂಪ ಇವಳಿಗೆ ನಾಲ್ಕು ಕೈಗಳು. ಬಲಬದಿಯ ಮೇಲಿನ ಹಸ್ತದಿಂದ ಸ್ಕಂದನನ್ನು ತೊಡೆಯಲ್ಲಿ ಕುಳ್ಳಿರಿಸಿ ಕೊಂಡಿರುವಳು. ಮೇಲಕ್ಕೆತ್ತಿರುವ ಕೆಳಬದಿಯ ಬಲಹಸ್ತದಲ್ಲಿ ತಾವರೆಯ ಹೂವಿದೆ. ಪದ್ಮಾಸನೆಯಾಗಿದ್ದು, ಸಿಂಹವಾಹಿನಿಯಾಗಿದ್ದಾಳೆ.

ಕಾತ್ಯಾಯಿನಿ: ಕಾತ್ಯಾಯನ ಎಂಬ ಮಹರ್ಷಿಯ ಮಗಳಾಗಿ ಜನಿಸಿ ಕಾತ್ಯಾಯಿನಿ ಎಂಬ ಹೆಸರಿಂದ ಪ್ರಸಿದ್ಧಿಯಾದವಳು. ಚತುರ್ಭುಜೆಯಾಗಿರುವ ಇವಳ ಬಲಬದಿಯ ಮೇಲಿನ ಹಸ್ತವು ಅಭಯಮುದ್ರೆಯನ್ನು ಹೊಂದಿದೆ, ಕೆಳಗಿನ ಹಸ್ತವು ವರಮುದ್ರೆ ಹೊಂದಿದೆ. ಎಡಬದಿಯ ಮೇಲಿನ ಹಸ್ತದಲ್ಲಿ ಖಡ್ಗವೂ ಕೆಳಗಿನ ಹಸ್ತದಲ್ಲಿ ತಾವರೆಯ ಹೂವಿದೆ. ಸಿಂಹವು ಇವಳ ವಾಹನ.

ಕಾಳರಾತ್ರಿ: ಕಾಳರಾತ್ರಿ ದುರ್ಗೆಯ ಏಳನೇ ಸ್ವರೂಪ. ಇವಳ ದೇಹದ ಬಣ್ಣವು ಕಡು ಕಪ್ಪಾಗಿದ್ದು, ಇವಳಿಗೆ ಮೂರು ಕಣ್ಣುಗಳು, ಕತ್ತೆಯು ಇವಳ ವಾಹನ. ಚತುರ್ಭುಜೆ ದೇವಿಯಾಗಿರುವ ಇವಳ ಮೇಲಕ್ಕೆತ್ತಿದ ಹಸ್ತವು ವರಮುದ್ರೆಯಲ್ಲಿದ್ದು, ಬಲಬದಿಯ ಕೆಳಗಿನ ಹಸ್ತವು ಅಭಯ ಮುದ್ರೆಯಲ್ಲಿದೆ. ಎಡಬದಿಯ ಮೇಲಿನ ಹಸ್ತದಲ್ಲಿ ಕಬ್ಬಿಣದ ಮುಳ್ಳು ಹಾಗೂ ಕೆಳಗಿನ ಹಸ್ತದಲ್ಲಿ ಖಡ್ಗವಿದೆ.

ಮಹಾಗೌರಿ: ಮಹಾಗೌರಿಯ ಬಣ್ಣ ಪೂರ್ತಿ ಶ್ವೇತ. ಇವಳ ಬಟ್ಟೆ ಹಾಗೂ ಒಡವೆಗಳೂ ಬಿಳುಪಾಗಿವೆ. ಇವಳಿಗೆ ನಾಲ್ಕು ಭುಜಗಳು, ಎತ್ತು ಇವಳ ವಾಹನವಾಗಿದ್ದು ಅದೂ ಕೂಡ ಬಿಳಿ ಬಣ್ಣದ್ದಾಗಿದೆ. ಮೇಲಿನ ಬಲಹಸ್ತವು ಅಭಯಮುದ್ರೆಯನ್ನು ಸೂಚಿಸುತ್ತಿದೆ, ಕೆಳಗಿನ ಬಲಕೈಯಲ್ಲಿ ತ್ರಿಶೂಲ, ಮೇಲಿನ ಎಡಕೈಯಲ್ಲಿ ಡಮರು ಹಾಗೂ ಎಡಹಸ್ತದಲ್ಲಿ ವರಮುದ್ರೆಯಿದೆ.

ಸಿದ್ಧಿಧಾತ್ರಿ: ಇದು ದುರ್ಗಾಮಾತೆಯ ಕೊನೆಯ ಸ್ವರೂಪ. ಇವಳು ಎಲ್ಲಾ ಪ್ರಕಾರದಲ್ಲಿ ಸಿದ್ಧಿಯನ್ನು ಕೊಡುವವಳಾಗಿದ್ದು, ಚತುರ್ಭುಜೆಯೂ, ಸಿಂಹವಾಹಿನಿಯೂ ಆಗಿದ್ದು ತಾವರೆಯ ಹೂವಿನ ಮೇಲೆ ಕುಳಿತಿರುವವಳು. ಇವಳ ಕೆಳಗಿನ ಬಲಹಸ್ತದಲ್ಲಿ ಚಕ್ರ, ಮೇಲಿನ ಹಸ್ತದಲ್ಲಿ ಗಧೆ, ಎಡಬದಿಯ ಕೆಳಗಿನ ಹಸ್ತದಲ್ಲಿ ಶಂಖ ಹಾಗೂ ಬಲಹಸ್ತದಲ್ಲಿ ತಾವರೆಯ ಹೂವಿದೆ.

ಈ ಎಲ್ಲಾ ನವಶಕ್ತಿಯರನ್ನು ಆರಾಧಿಸಿದ ನವರಾತ್ರಿಗಳು ಕಳೆದ ನಂತರ ಬರುವುದೇ ವಿಜಯ ದಶಮಿ. ಅಂದು ದುರ್ಗೆಯು ಮಹಿಷಾಸುರನೆಂಬ ರಾಕ್ಷಸನನ್ನು ಸಂಹರಿಸಿದ ದಿನ. ವಿಜಯೋತ್ಸವದ ಸಂಭ್ರಮ.